ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 5 ಚಾಸಾ- 6**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಎಂ ಪಿ. ರಮೇಶ್ |
| ತಂದೆಯ ಹೆಸರುಃ | : | ಎಂ.ಕೆ.ಪುಟ್ಟಸ್ವಾಮಾಚಾರ್ |
| ವಯಸ್ಸುಃ | : | 50 ವರ್ಷ |
| ಉದ್ಯೋಗಃ | : | ಅಕ್ಕಸಾಲಿಗರು |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 13-06-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಕಳೆದ 32 ವರ್ಷಗಳಿಂದ ನಾನು ಹಾಸನ ಎಸ್ ಆರ್ ಎಸ್ ಜ್ಯುವೆಲರ್ ನಲ್ಲಿ ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದೇನೆ.

2.ದಿನಾಂಕ 26-7-2013ರಂದು ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಪೊಲೀಸರು ನಮ್ಮ ಅಂಗಡಿಗೆ ಬಂದು ಉದಯಗಿರಿಯಲ್ಲಿ ಒಂದು ಮನೆಯಲ್ಲಿ ದಾಳಿಯಾಗಿದೆ, ಚಿನ್ನದ ಮೌಲ್ಯಮಾಪನ ಮಾಡಬೇಕು ಬನ್ನಿ ಎಂದು ಕರೆದರು. ಅದರಂತೆ ನಾನು ಅವರ ಜೊತೆ ಉದಯಗಿರಿ ಬಡಾವಣೆಯಲ್ಲಿರುವ ಆನಂದ್ ಎಂಬುವವರ ಮನೆಗೆ ಹೋದೆನು. ಅಲ್ಲಿ ಲೋಕಾಯುಕ್ತ ಅಧಿಕಾರಿಗಳು ಹಾಗೂ ಮತ್ತಿತರರು ಇದ್ದರು. ಅಲ್ಲಿದ್ದ ಚಿನ್ನವನ್ನು ಓರೆ ಹಚ್ಚಿ ತೂಕ ಮಾಡಿದನು. ಅಲ್ಲಿ ಸುಮಾರು 450ಗ್ರಾಂ ಚಿನ್ನ ಇದ್ದು ಆ ಸಮಯದಲ್ಲಿ ಒಟ್ಟು ಬೆಲೆ ಸುಮಾರು11,45,000 ರೂಪಾಯಿ ಆಗಿತ್ತು. ಅಲ್ಲದೆ ಆನಂದ ಮತ್ತು ಅವರ ಹೆಂಡತಿಯ

ಮೈಮೇಲೆ ಇದ್ದ ಚಿನ್ನವನ್ನು ತೂಕ ಮಾಡಿ ಮೌಲ್ಯಮಾಪನ ಮಾಡಲು ಹೇಳಿದರು. ಅವರಿಬ್ಬರ ಮೈಮೇಲೆ ಒಟ್ಟು 100ಗ್ರಾಂ ಚಿನ್ನ ಇತ್ತು. ಅದನ್ನು ಓರೆ ಹಚ್ಚಿ ತೂಕಮಾಡಿದೆನು. ಅದರ ಬೆಲೆ ಆಗ ಸುಮಾರು 2,45,000ರೂಪಾಯಿ ಆಗಿತ್ತು. ಅಲ್ಲಿ ಪೊಲೀಸರು ಪಂಚನಾಮೆ ಮಾಡಿದರು, ಅದಕ್ಕೆ ನಾನು ಸಹಿ ಹಾಕಿದೆನು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-15 ಆಗಿರುತ್ತದೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-15(ಸಿ) ಎಂದು ಗುರುತಿಸಲಾಯಿತು.

3.ಅಲ್ಲಿಂದ ನಂತರ ಕುವೆಂಪುನಗರದಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಗೆ ಕರೆದುಕೊಂಡು ಹೋದರು. ಅಲ್ಲಿ ಲಾಕರ್ ನಂಬರ್ 29 ಶುಭ ಎಂಬುವವರಿಗೆ ಸೇರಿತ್ತು, ಅದನ್ನು ಪರಿಶೀಲಿಸಿದಾಗ ಒಂದು ಬಾಕ್ಸ್ ನಲ್ಲಿ 125ಗ್ರಾಂ ಚಿನ್ನ ಇತ್ತು. ಅದನ್ನು ಓರೆ ಹಚ್ಚಿ ತೂಕ ಮಾಡಿದೆನು. ಆಗ ಅದರ ಬೆಲೆ 3,07,000ರೂಪಾಯಿ ಎಂದು ಮೌಲ್ಯಮಾಪನ ಮಾಡಿರುತ್ತೇನೆ. ಆ ಬಗ್ಗೆ ಕೂಡ ಮಹಜರು ಮಾಡಿರುತ್ತಾರೆ. ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ನಿಪಿ-56 ಆ ಮಹಜರ್ ಆಗಿದ್ದು ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ-56(ಡಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಆ ಚಿನ್ನವನ್ನು ಅವರು ಯಾವಾಗ ಎಷ್ಟು ಬೆಲೆಗೆ ಖರೀದಿ ಮಾಡಿದ್ದಾರೆಂದು ಗೊತ್ತಿಲ್ಲ. ಅವರು ಖರೀದಿಸಿದ ದಿನಕ್ಕೂ ನಾನು ಅದನ್ನು ತೂಕ ಮಾಡಿ ಮೌಲ್ಯಮಾಪನ ಮಾಡಿದ ದಿನಕ್ಕೂ ಆ ಚಿನ್ನದ ಬೆಲೆಯಲ್ಲಿ ವ್ಯತ್ಯಾಸವಿತ್ತು ಎಂದರೆ ನಿಜ. ಆ ಚಿನ್ನದಲ್ಲಿದ್ದ ಹರಳು, ಕಲ್ಲು ಇತ್ಯಾದಿಯನ್ನು ಬೇರ್ಪಡಿಸಿಯೇ ತೂಕ ಮಾಡಿರುತ್ತೇನೆ. ಆದರೆ ಆ ಹರಳು ಮತ್ತು ಕಲ್ಲನ್ನು ಬೇರ್ಪಡಿಸಿಲ್ಲ. ಹರಳು ಮತ್ತು ಕಲ್ಲಿನ ಮೌಲ್ಯಮಾಪನ ಮಾಡಿಲ್ಲ. ಪೊಲೀಸರು ನನ್ನನ್ನು ನೋಟೀಸು ಕೊಟ್ಟು ಕರೆಸಿಲ್ಲ. ನನಗೆ ಅಕ್ಕಸಾಲಿಗರ ಕೆಲಸ ಮಾಡಲು ಲೈಸೆನ್ಸ್ ಇರುತ್ತದೆ.

ಮೌಲ್ಯಮಾಪನ ಮಾಡಲು ಲೈಸೆನ್ಸ್ ಇಲ್ಲ. ನನ್ನ ತೂಕಮಾಪನವನ್ನು ತೂಕ ಮತ್ತು ಅಳತೆ ಇಲಾಖೆಯಲ್ಲಿ ಸ್ಟ್ಯಾಂಪಿಂಗ್ ಮಾಡಿಸಿರುತ್ತೇನೆ. ಆ ಬಗ್ಗೆ ಪೊಲೀಸರಿಗೆ ದಾಖಲೆ ಕೊಟ್ಟಿಲ್ಲ. ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ಆ ದರವನ್ನು ನಮೂದಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಕ್ಕಸಾಲಿಗನಾಗಿದ್ದರೂ ಕೂಡ ಚಿನ್ನದ ಮೌಲ್ಯ ನಿರ್ಧರಿಸುವಂತಹ ಪರಿಣಿತಿ ಇಲ್ಲ ಎಂದರೆ ಸರಿಯಲ್ಲ. ಆದರೂ ಕೂಡ ಪೊಲೀಸರ ಕೋರಿಕೆ ಮೇರೆಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿದ್ದ ಲಾಕರ್ ನಲ್ಲಿದ್ದ ಚಿನ್ನವನ್ನು ಮೌಲ್ಯಮಾಪನ ಮಾಡಿದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-15 ಮತ್ತು 56ರಲ್ಲಿ ಏನು ಬರೆದಿದೆ ಎಂದು ಗೊತ್ತು. ಎರಡೂ ಮಹಜರುಗಳನ್ನು ಆಯಾಯ ಸ್ಥಳದಲ್ಲಿಯೇ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**